**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 21/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಎಲಿಜಿಬೆತ್ ಮನೋಹರ | ಪ್ರಮಾಣ ಮಾಡಿದ ದಿನಾಂಕ: |
| ಗಂಡನ ಹೆಸರು | : ಅನಿಲ್ ಶಾಂತಕುಮಾರ | **21.02.2023** |
| ವಯಸ್ಸು | : **62** ವರ್ಷ | |
| ವೃತ್ತಿ | : ಗೃಹಿಣಿ | ಪಿಡಬ್ಲ್ಯೂ : **09** |
| ವಾಸ ಸ್ಥಳ | : ತುಮಕೂರು | ಸಿಡಬ್ಲ್ಯೂ : **03** |

*ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:*

ಮೃತ ಪವಿತ್ರಾಕುಮಾರಿ ನನ್ನ ಅಣ್ಣನ ಹೆಂಡತಿ ಇರುತ್ತಾಳೆ. ದಿನಾಂಕ 11.06.2015ರಂದು ನನ್ನ ಅತ್ತಿಗೆಯ ಶವವನ್ನು ಮೈಸೂರಿನ ಮಿಷನ್ ಆಸ್ಪತ್ರೆಯಲ್ಲಿ ಸಾಯಂಕಾಲ ನೋಡಿದ್ದೇನೆ. ನನ್ನ ಅತ್ತಿಗೆ ವಿಷವನ್ನು ಸೇವನೆ ಮಾಡಿ ಮೃತಪಟ್ಟಿದ್ದಳು. ಪೊಲೀಸರು ಮರುದಿನ ನನ್ನ ಅತ್ತಿಗೆಯ ಶವ ಮಹಜರನ್ನು ಮಾಡಿದ್ದರು. ಆಗ ನಾನು ಸಹಿ ಮಾಡಿದ್ದೇನೆ. ಈಗ ತೋರಿಸಿದ ದಾಖಲೆ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯು ಶವ ಮಹಜರ ಆಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ರುಜುವನ್ನು ನಿಪಿ-2(ಬಿ) ಎಂದು ಗುರುತಿಸಿದೆ. ಮೃತ ಅತ್ತಿಗೆಯು ಆರೋಪಿ ವೇದಾವತಿಯಿಂದ ಸಾಲ ಮಾಡಿ ಹೆಚ್ಚಿನ ಬಡ್ಡಿ ಕೊಡುವ ವಿಚಾರದಲ್ಲಿ ಗಲಾಟೆ ಆಗಿದ್ದ ಸಂಬಂಧ, ವಿಷ ಸೇವನೆ ಮಾಡಿರುವುದಾಗಿ ತಿಳಿಯಿತು. ಸಾಯುವದಕ್ಕಿಂತ ಮುಂಚೆ ನನ್ನ ಅತ್ತಿಗೆ ಆರೋಗ್ಯವಾಗಿದ್ದಳು. ಅವಳಿಗೆ ಯಾವುದೇ ಖಾಯಿಲೆ ಇರಲಿಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದ:-

2. ನಾನು ತುಮಕೂರಿನಲ್ಲಿ ವಾಸವಾಗಿದ್ದೇನೆ. ಮೃತ ಪವಿತ್ರಾಕುಮಾರಿ ಯಾರಾರಿಂದ ಎಷ್ಟು ಹಣ ಪಡೆದುಕೊಂಡಿದ್ದರು ಅಂತ ಗೊತ್ತಿಲ್ಲ. ಮೃತ ಪವಿತ್ರಾಕುಮಾರಿಗೆ ತುಮಕೂರಿಗೆ ಬರಲು ಕೇಳಿಕೊಂಡಾಗ ಅವರು ಸಾಲದ ಹಣ ಕೊಡುವುದಿದೆ, ಅದನ್ನು ಕೊಟ್ಟು ತುಮಕೂರಿಗೆ ಬರುತ್ತೇನೆ ಅಂತ ಸಾಯುವದಕ್ಕೂ ಮೂರು ದಿನ ಮೊದಲು ಫೋನ್‌ನಲ್ಲಿ ಹೇಳಿದ್ದರು. ಮೃತ

**ಪವಿತ್ರಾಕುಮಾರಿಯ ಮೊಬೈಲ್ ಫೋನ ನಂಬರ ಗೊತ್ತಿಲ್ಲ. ನಾವು ತುಮಕೂರಿನಿಂದ ಮೈಸೂರಿಗೆ ಪವಿತ್ರಾಕುಮಾರಿ ಮೃತಪಟ್ಟ ದಿನ ಬಂದೆವು. ಪೊಲೀಸರು ನನ್ನನ್ನ ಮಿಷನ್ ಆಸ್ಪತ್ರೆಯಲ್ಲಿ ಮರು ದಿನ ಅಂದರೆ ದಿನಾಂಕ 12ರಂದು ವಿಚಾರಣೆ ಮಾಡಿದ್ದರು. ಪೊಲೀಸರು ನನ್ನ ಹೇಳಿಕೆ ಬರೆದು ಕೊಂಡರು, ಅದಕ್ಕೆ ನಾನು ಸಹಿ ಮಾಡಿದ್ದೇನೆ. ನಾನು ಹೇಳಿಕೆ ಕೊಡುವ ಸಂದರ್ಭದಲ್ಲಿ ಪೊಲೀಸರ ಮುಂದೆ ಪವಿತ್ರಾಕುಮಾರಿ ಸಾಯುವ ಮೂರು ದಿನ ಮೊದಲು ನಮಗೆ ಫೋನ ಮಾಡಿ ಸಾಲದ ಹಣ ಕೊಡುವುದಿದೆ ಅದನ್ನು ಕೊಟ್ಟು ತುಮಕೂರಿಗೆ ಬರುತ್ತೇನೆ ಅಂತ ಹೇಳಿದ್ದಳು ಅಂತ ಹೇಳಿರಲಿಲ್ಲ. ಆ ಪ್ರಕಾರ ಪವಿತ್ರಾಕುಮಾರಿ ಹೇಳದೇ ಇರುವುದರಿಂದ ನಾನು ಅದೇ ರೀತಿ ಪೊಲೀಸರ ಮಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಆತರಹ ವಿಚಾರಣೆ ಮಾಡಿಲ್ಲ. ಪೊಲೀಸರು ನನ್ನ ಹೆಸರು, ವಿಳಾಸ ಬರೆದುಕೊಂಡು ಸಹಿ ಮಾಡಿಸಿಕೊಂಡರು. ಮೃತ ದೇಹವನ್ನು ತೋರಿಸಿದರು. ಪೊಲೀಸರು ಏನು ಬರೆದುಕೊಂಡರು ಅಂತ ಕೇಳಲಿಲ್ಲ ಮತ್ತು ಅದನ್ನು ನಾನು ಓದಲಿಲ್ಲ. ಮೃತ ಪವಿತ್ರಾಕುಮಾರಿ ಮನೆಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಮರು ವಿಚಾರಣೆಃ- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**21.02.2023.**
**[ ಜಿ.ಎಸ್. ಸಂಗ್ರೇಶಿ ]**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**